ಏರು-ತಗ್ಗು ಮಾರ್ಗಗಳಿಂದಾಗಿ ಇಂಧನ ಹೆಚ್ಚಿ, ಟಯರ್, ಟ್ಯೂಬ್ ಸಮೇತ ಹೆಚ್ಚಿಂಬುದು ಹಾಗೂ ವಿಶೇಷ ಮಳೆ ಇರುವ ಜಿಲ್ಲೆಗಳಲ್ಲಿ ರಸ್ತೆ ಹಾಳಾಗಿ ಹೊಂಡಗಳಾಗಿ ರಿಕ್ಷಾಗಳಿಗೆ ಹೆಚ್ಚಿನ ನಿರ್ವಹಣಾ ವೆಚ್ಚ ಬರುತ್ತಿದ್ದರೂ ಸಮತಟ್ಟಾದ ರಸ್ತೆ ಇರುವ ಸ್ಥಳಗಳ ಮೀಟರ್ ದರವನ್ನೇ ಎಲ್ಲೆಡೆಗೂ ವಿಧಿಸುವುದು ಸಮಂಜಸವೇ? ಈ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ಯಾವಾಗ ಯಾವ ಕ್ರಮ ಕೈಗೊಳ್ಳಲಾಗುವುದು ಎಂಬ ವಿಚಾರದಲ್ಲಿ ಸ್ಪಷ್ಟೀಕರಣ ನೀಡಬೇಕಾಗಿ ಆಗ್ರಹಪಡಿಸುತ್ತೇವೆ.

ಶ್ರೀ ವೀರಣ್ಣ (ಮಾನ್ಯ ಸಾರಿಗೆಮತ್ತು ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಫ್ಲ್ಯಾಗ್ ಮೀಟರ್‌ನ್ನು ಆಟೋರಿಕ್ಷಾಗಳಿಗೆ ಅಳವಡಿಸಬೇಕೆಂದು ಈ ಸರ್ಕಾರ ಆಜ್ಞೆ ಮಾಡಿದ್ದಲ್ಲ. ರ್ಟ್‌ನೇ ಇಸವಿಯಲ್ಲಿ ಈ ನಿರ್ಣಯವನ್ನು ಮಾಡಿತ್ತು. ಆಗ ಯಾವ ಸರ್ಕಾರಿ ಇತ್ತೋ ಗೊತ್ತಿಲ್ಲ. ನಂತರ ಆ೦ಕಿ ಮೀಟರೇ ಇರಬೇಕೆಂದು ತೀರ್ಮಾನವನ್ನು ತೆಗೆದುಕೊಂಡರು. ಆದರೆ ಫ್ಲ್ಯಾಗ್ ಮೀಟರ್ ಅಳವಡಿಸುವುದು ಯಾವ ಕಾರಣದಿಂದ ಜಾರಿಗೆ ಬರಲಿಲ್ಲವೋ ಗೊತ್ತಿಲ್ಲ. ಇದಾದಮೇಲೆ ಸಾರ್ವಜನಿಕರಿಂದ, ಪ್ರಯಾಣಿಕರಿಂದ ಅನೇಕ ದೂರುಗಳು ಬಂದವು. ಅದು ಏನೆಂದರೆ ರಿಕ್ಷಾ ಡ್ರೈವರ್‌ಗಳು ಪ್ರಯಾಣಿಕರಿಂದ ಪೆಯ್ಟಿಂಗ್ ಛಾರ್ಜಸ್ ಕೇಳಲು ಪ್ರಾರಂಭ ಮಾಡಿದರು. ಫ್ಲ್ಯಾಗ್ ಮೀಟರ್‌ನಲ್ಲಾದರೆ ಪೆಯ್ಟಿಂಗ್ ಛಾರ್ಜ್ ರೆಕಾರ್ಡ್ ಆಗುತ್ತದೆ. ಆದರೆ ಆ೦ಕಿ ಮೀಟರ್‌ನಲ್ಲಿ ಇದು ರೆಕಾರ್ಡ್ ಆಗುವುದಿಲ್ಲ. ಇದರ ಜೊತೆಗೆ ಹಳ್ಳ-ಉಬ್ಬುಗಳಲ್ಲಿ ಆಟೋರಿಕ್ಷಾ ಕುಲುಕಿದಾಗ ಮೀಟರ್ ಹೆಚ್ಚು ಕಡಿಮೆಯಾಗಿ ಹತ್ತಿಪ್ಪತ್ತು ಪೈಸೆ ಜಾಸ್ತಿಯಾಗುತ್ತದೆ. ಇದರಿಂದಾಗಿ ಫ್ಲ್ಯಾಗ್ ಮೀಟರನ್ನು ಅಳವಡಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡೆವು. ಇನ್ನು ಮುಂದೆ ಬೆಂಗಳೂರು ನಗರದಲ್ಲಿರ ತಕ್ಕ ಎಲ್ಲಾ ರಿಕ್ಷಾಗಳಿಗೂ ಆ೦ಕಿ ಮೀಟರ್‌ಗೆ ಬದಲಾಗಿ ಫ್ಲ್ಯಾಗ್ ಮೀಟರನ್ನು ಅಳವಡಿಸಬೇಕೆಂದು ಮಾಡುತ್ತಿದ್ದೇವೆ. ಹೊಸದಾಗಿ ಲೈಸೆನ್ಸ್ ಕೊಡುವಾಗ, ರಿಜಿಸ್ಟ್ರೇಷನ್ ಮಾಡುವಾಗ ಈ ಮೀಟರ್‌ಗಳನ್ನು ಅಳವಡಿಸಬೇಕೆಂದು ತೀರ್ಮಾನಿಸಿದ್ದೇವೆ. ಈ ಕೆಲಸವನ್ನು ಹಂತಹಂತವಾಗಿ ಮಾಡುತ್ತೇವೆ. ಆಟೋರಿಕ್ಷಾ ಅಸೋಸಿಯೇಷನ್‌ನವರೂ ಕೂಡ ಈ ವಿಚಾರವನ್ನು ಒಪ್ಪಿದ್ದಾರೆ. ಮಾನ್ಯ ಸದಸ್ಯರು ಈ ಮೀಟರ್‌ನ ಬೆಲೆ ೨೦೦೦ ದಿಂದ ೨೫೦೦ ರೂಪಾಯಿಯವರೆಗೂ ಆಗುತ್ತದೆಂದು ಹೇಳುತ್ತಿರುವುದು ಅವರ ತಪ್ಪು ಕಲ್ಪನೆಯಾಗಿದೆ. ಕೆಲವು ಕಂಪನಿಯ ಮೀಟರ್‌ಗಳು ೭೫೦ ರೂಪಾಯಿಗಳಿಗೂ ಮತ್ತೆ ಕೆಲವು ಕಂಪನಿಗಳ ಮೀಟರುಗಳು ೯೫೦ ರೂಪಾಯಿಗಳಿಗೂ ಸಿಕ್ಕುತ್ತವೆ. ಈ ಮೀಟರ್‌ಗಳನ್ನು ಅಳವಡಿಸಬೇಕೆಂದು ತೀರ್ಮಾನ ಕೈಗೊಂಡಿರುವುದು ಪ್ರಯಾಣಿಕರಿಗೆ ಮತ್ತು ಡ್ರೈವರ್‌ಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದಲೇ ಹೊರತು ಮೀಟರ್ ತಯಾರು ಮಾಡತಕ್ಕ ಕಂಪನಿಯವರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದಲ್ಲವೆಂದು ಹೇಳ ಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಮನೋರಮಾ ಮಧ್ವರಾಜ್‌ರವರು ಇನ್ನೊಂದು ಪ್ರಶ್ನೆಯನ್ನು ಏನು ಕೇಳಿದ್ದಾರೆಂದರೆ, ಸಮತಟ್ಟಾಗಿರುವ ಪ್ರದೇಶವಾದ ಬೆಂಗಳೂರಿನಲ್ಲಿರುವ ಆಟೋರಿಕ್ಷಾ ದರವನ್ನೇ ನಮ್ಮ ಬೆಟ್ಟಗುಡ್ಡವ ಪ್ರದೇಶದ ರಿಕ್ಷಾಗಳಿಗೂ ನಿಗದಿಮಾಡಿದರೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಅವರು ಹೇಳುವುದು ಸರಿಯಾಗಿದೆ. ಆದ್ದರಿಂದಲೇ ಬೆಟ್ಟಗುಡ್ಡದಿಂದ ಕೂಡಿರತಕ್ಕ ಪ್ರದೇಶದಲ್ಲಿ ಶೇಕಡ ೧೧ರಷ್ಟು ದರವನ್ನು ಜಾಸ್ತಿ ವಸೂಲುಮಾಡಿಕೊಳ್ಳಬಹುದೆಂದು ನಾವು ಆನುಮತಿಯನ್ನು ಕೊಟ್ಟಿದ್ದೇವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇಷ್ಟೆಲ್ಲಾ ಮಾಡಿರುವುದು ಪ್ರಯಾಣಿಕರಿಗೆ ಮತ್ತು ಡ್ರೈವರ್‌ಗಳಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದಲೇ ಹೊರತು ಮೀಟರ್ ಉತ್ಪಾದಕರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದಲ್ಲ ಎನ್ನತಕ್ಕ ಮಾತನ್ನು ನಾನು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬಯಸುತ್ತೇನೆ.

XIV ವಾಣಿವಿಲಾಸ ಸಾಗರ ಅಚ್ಚುಕಟ್ಟಿನಲ್ಲಿ ತೆಂಗು ಅಡಿಕೆ ನೀರಿಲ್ಲದೆ ಒಣಗುತ್ತಿರುವುದು

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲೂಕು ವಾಣಿವಿಲಾಸ ಸಾಗರದ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದು ನಿಂತಿರುವ ಸುಮಾರು ೩೦ ಸಾವಿರ ಎಕರೆ ವಿಸ್ತೀರ್ಣ ಪ್ರದೇಶದ ಅಡಿಕೆ, ತೆಂಗು ಸಾಗರದಲ್ಲಿ ನೀರಿಲ್ಲದ ನಿಮಿತ್ತ ಒಣಗುತ್ತಿದೆ. ಇದರ ಬಗ್ಗೆ ಸರ್ಕಾರದ ಏನೆಲ್ಲಾ ಗಮನವನ್ನು ಸೆಳೆದೂ ಸಹ ಫಲಪ್ರದವಾಗಿಲ್ಲ. ಇದರಿಂದಾಗಿ ರೈತನಿಗೆ ಉಸಿರು ಕಟ್ಟಿದಂತಾಗಿದೆ. ಮಳೆಗಾಲ ಮುಗಿಯುತ್ತಾ ಬಂದರೂ ನೀರು ಬಂದಿಲ್ಲ. ಭವ್ಯ ಮೇಲ್ದಂಡೆಯ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಆಶ್ವಾಸನೆ ನೆನೆಗುದಿಯಲ್ಲಿದೆ. ಈ ಎಲ್ಲಾ

ನಿಗೂಢತೆಯ ಬಲೆಯಲ್ಲಿ ರೈತ ಬಲಿಯಾದರೆ ಅಭಿವೃದ್ಧಿಗೆ ಭವಿಷ್ಯವಿಲ್ಲದಂತಾಗುತ್ತದೆ. ಆದ ಪ್ರಯುಕ್ತ ಸರ್ಕಾರ ಬೆಳೆದು ನೆರವಿಗೆ ನಿಂತಿರುವ ಈ ಸಿರಿ ಸಂಪತ್ತನ್ನು ಉಳಿಸಲೇಬೇಕೆಂಬ ಫಲದಿಂದಲಾದರು ಸರ್ಕಾರದ ವೆಚ್ಚದಿಂದಲೇ ನೀರು ದೊರೆಯುವ ಎಡೆಯಲ್ಲೂ ಈ ಸೀಮಿತ ತೆಂಗಿನ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ನೀರುಣಿಸಿ ರೈತನಿಗೆ ಉಪಕರಿಸಿದರೆ ರೈತನು ನಮಿಸಿ ಉದ್ಧಾರವಾಗುವನೆಂಬ ಆಶಯ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

XV Sanction of Posts to the office of the Deputy Director of Collegiate Education Mangalore

SRI BLASIUS M. D'SOUZA (Mangalor).—The office of the Regional Deputy Director of Collegiate Education was started at Mangalore with an intention of speedy disposal of files relating to colleges of this region. But the intention with which this office was started is not being fulfilled since the staff required to this office has not been sanctioned. There is only one Superintendent and one Clerk-*cum*-Typist which will not be sufficient. Hence, I urge the Government to sanction at least four Superintendents and four Clerks immedately in view of the density of colleges in this region.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಕೊಲಿಜಿಯೇಟ್ ಎಜುಕೇಷನ್ ನಿರ್ದೇಶಕರಿಗೆ ಆದೇಶ ನೀಡಿ ಅಲ್ಲಿಗೆ ಹೆಚ್ಚಿನ ಸಿಬ್ಬಂದಿ ವರ್ಗದ ಆವಶ್ಯಕತೆ ಇದೆಯೋ ಇಲ್ಲವೆ ಎಂಬ ಬಗ್ಗೆ ವರದಿ ನೀಡಬೇಕೆಂದು ತಿಳಿಸಿ ಒಂದು ವೇಳೆ ಹೆಚ್ಚಿನ ಸಿಬ್ಬಂದಿವರ್ಗದ ಅವಶ್ಯಕತೆ ಇದೆಯೆಂದು ತಿಳಿದುಬಂದರೆ ಖಂಡಿತವಾಗಿಯೂ ಮಂಜೂರು ಮಾಡಿಸಿಕೊಡುತ್ತೆನೆ.

XVI. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ ಮಳೆ ಬೀಳದೆ ಭೀಕರ ಪರಿಸ್ಥಿತಿ ಉಂಟಾಗಿರುವುದು

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನಲ್ಲಿ ಮಳೆ ಬೀಳದೆ ಇರುವಾಗ ಸರ್ಕಾರ ಬರಗಾಲ ಕಾಮಗಾರಿ ಕೆಲಸಗಳನ್ನು ನಿಲ್ಲಿಸಿರುವುದರಿಂದ ಜನರು ತುಂಬಾ ಕಷ್ಟದಲ್ಲಿದ್ದು ಕಾಮಗಾರಿ ಕೆಲಸಗಳನ್ನು ಮುಂದುವರೆಸುವಂತೆ ಮತ್ತು ದನಕರುಗಳಿಗೆ ಮೇವು ಒದಗಿಸಲು ಒತ್ತಾಯಿಸಿ ಸಿಂಧಗಿಯ ರೈತರು ತಾ, ೧೫-೮-೮೬ರಿಂದ ಜೈಲು ಭರೋ ಕಾರ್ಯಕ್ರಮ ನಡೆಸುತ್ತಿದ್ದಾರೆ. ತಾ. ೧೯-೮-೮೬ರಂದು ೩೨೦ ಜನ ರೈತರು ಜೈಲು ಸೇರಿದ್ದಾರೆಂದು ಟೆಲಿಗ್ರಾಂ ಬಂದಿದೆ. ಪರಿಸ್ಥಿತಿ ಭೀಕರವಾಗಿರುವುದರಿಂದ ಇದರ ಬಗ್ಗೆ ಸದನದಲ್ಲಿ ಸಂಬಂಧಪಟ್ಟ ಸಚಿವರೇ ಹೇಳಿಕೆ ನೀಡಲು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಇದೇ ತಿಂಗಳ ೪ನೇ ತಾರೀಖು ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದಿದ್ದೆವು. ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಮಾಹಿತಿಯನ್ನು ನಾವು ತೆಗೆದುಕೊಂಡಿದ್ದೇವೆ. ಅಲ್ಲದೆ ಈ ತಿಂಗಳ ೧೫ನೇ ತಾರೀಖಿನವರೆಗೆ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸುತ್ತೇವೆಂದು ಅವರು ಹೇಳಿದ್ದಾರೆ. ಅವರ ವರದಿ ಬಂದಕೂಡಲೇ ಎಲ್ಲೆಲ್ಲಿ ಮಳೆ ಬಿದ್ದಿಲ್ಲ ಅಂಥ ಕಡೆ ಮುಂದೆ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆಯೆಂದು ಹೇಳಬಯಸುತ್ತೇನೆ.